₹ 5
ಸಂಪುಟ: 3 ಸಂಚಿಕೆ: 332 ಪುಟಗಳು: 10+4
06.12.2018 ಗುರುವಾರ
ಬೆಂಗಳೂರು । ಹುಬ್ಬಳ್ಳಿ । ಮಂಗಳೂರು
ದಾವಣಗೆರೆ । ಕಲಬುರಗಿ । ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್




ಸ್ಮಾರಕಗಳ ಸಂತೆಯಲ್ಲಿ ಆದರ್ಶಗಳು ಸಮಾಧಿಯಾಗದಿರಲಿ!
ನೂರೆಂಟು ವಿಶ್ವ 6

ದಾರಿದೀಪೋಕ್ತಿ
ಮನೆಯಲ್ಲಿ ತಾಯಿ ಇರುವಷ್ಟೂ ದಿವಸ ಹಸಿವು ಅಂದ್ರೆ ಏನೆಂಬುದು ಗೊತ್ತಾಗುವುದಿಲ್ಲ. ತಂದೆ ಇರುವ ತನಕ ಹೊಣೆಗಾರಿಕೆ ಅಂದ್ರೆ ಏನೆಂಬುದು ತಿಳಿಯುವುದಿಲ್ಲ. ಇವರನ್ನು ಕಳೆದುಕೊಂಡಾಗ ಅವರೆಡರ ಮಹತ್ವ ಗೊತ್ತಾಗುತ್ತದೆ.


# ವಿಶ್ವವಾಣಿ
ವಿಶ್ವಾಸವೇ ವಿಶ್ವ





## ಅಷ್ಟೂ ಸಾಲ ತೀರಿಸುತ್ತೇನೆ: ಮಲ್ಯ



**ದೆಹಲಿ:** ಸಾವಿರಾರು ಕೋಟಿ ಸಾಲ ಮಾಡಿ ಮರು ಪಾವತಿ ಮಾಡದೇ ವಿದೇಶಕ್ಕೆ ಪರಾರಿಯಾಗಿರುವ ಉದ್ದೇಶಿತ ಸುಸ್ಥಿದಾರ ವಿಜಯ್ ಮಲ್ಯ ತಾವು ಮಾಡಿರುವ ಎಲ್ಲ ಸಾಲವನ್ನು ತೀರಿಸುವುದಾಗಿ ಹೇಳಿಕೆ ನೀಡಿದ್ದಾರೆ. ಭಾರತಕ್ಕೆ ಹಸ್ತಾಂತರಿಸುವ ಕುರಿತ ಅರ್ಜಿ ವಿಚಾರಣೆ ಬ್ರಿಟನ್ ಕೋರ್ಟ್‌ನಲ್ಲಿ ನಡೆಯುತ್ತಿದ್ದು, ಮುಂದಿನ ವಿಚಾರಣೆಗೆ ಐದು ದಿನಗಳು ಬಾಕಿ ಇರುವಾಗ ಮಲ್ಯ ಸರಣಿ ಟ್ವೀಟ್ ಮಾಡಿದ್ದಾರೆ.

## ಕಲ್ಲಿದ್ದಲು ಹಗರಣ ಮೂವರಿಗೆ ಶಿಕ್ಷೆ

**ದೆಹಲಿ:** ಕಲ್ಲಿದ್ದಲು ನಿಕ್ಷೇಪ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ನ್ಯಾಯಾಲಯ ಇಲಾಖೆಯ ಮಾಜಿ ಕಾರ್ಯದರ್ಶಿ ಎಚ್.ಸಿ ಗುಪ್ತಾ ಸೇರಿ ಒಟ್ಟು ಮೂವರಿಗೆ 3 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಬುಧವಾರ ತೀರ್ಪು ಪ್ರಕಟಿಸಿದ ಕೋರ್ಟ್, ತಲಾ 50 ಸಾವಿರು ರು. ದಂಡವನ್ನು ವಿಧಿಸಿತು. ಇನ್ನು ಶಿಕ್ಷೆ ನಾಲ್ಕು ವರ್ಷಕ್ಕಿಂತ ಕಡಿಮೆ ಇರುವ ಹಿನ್ನೆಲೆಯಲ್ಲಿ ಇವರಿಗೆ ಜಾಮೀನು ನೀಡಲು ಒಪ್ಪಿಗೆ ಸೂಚಿಸಿತು.


ಐಐಎಸ್ಸಿಯಲ್ಲಿ ಸ್ಫೋಟ ಸಂಶೋಧಕ ಸಾವು 9


**ವಕ್ರತುಂಡೋಕ್ತಿ**
ಕೆಲವರು ಸುರಕ್ಷಿತ ಜಾಗವೆಂದು ಅಮೂಲ್ಯ ವಸ್ತುವನ್ನು ಇಟ್ಟಿರುತ್ತಾರೆ. ಆದರೆ ಸುರಕ್ಷಿತ ಜಾಗವನ್ನೇ ಮರೆತುಬಿಡುತ್ತಾರೆ.

### ಡಿ.22ಕ್ಕೆ ಸಂಪುಟ ವಿಸ್ತರಣೆ । ಬಂಡಾಯದ ಬಿಕ್ಕಟ್ಟು ಆಯಾ ಪಕ್ಷದ ಹೆಗಲಿಗೆ

# ಸಂಪುಟ ವಿಸ್ತರಣೆಗೆ ಸಮನ್ವಯ ಅಸ್ತು

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಮೈತ್ರಿ ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಸಂಪುಟ ವಿಸ್ತರಣೆ ಬಗ್ಗೆ ಕೇಳಿಬರುತ್ತಿರುವ ವಿವಾದ, ಗೊಂದಲ, ಬಂಡಾಯವನ್ನೆಲ್ಲ ಮೀರಿ ಬಾಕಿಯಿರುವ ಸಚಿವ ಸ್ಥಾನಗಳನ್ನು ಭರ್ತಿ ಮಾಡಲು ಡಿ.22 ಒಪ್ಪಿಗೆ ನೀಡುವುದರೊಂದಿಗೆ ಬಂಡಾಯದ ಬಿಸಿ ತಣಿಸಲು ಯತ್ನಿಸಲಾಯಿತು.

ಶಾಸಕರ ಬಂಡಾಯವನ್ನು ಆಯಾ ಪಕ್ಷದ ನಾಯಕರೇ ನಿಭಾಯಿಸಬೇಕೆನ್ನುವ ಒಪ್ಪಂದವನ್ನು ದೋಸ್ತಿ ನಾಯಕರು ಮಾಡಿಕೊಂಡಿದ್ದಾರೆ.

ಸಮನ್ವಯ ಸಮಿತಿ ಅಧ್ಯಕ್ಷ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕುಮಾರ ಕೃಪಾ ಅತಿಥಿಗೃಹದಲ್ಲಿ ಬುಧವಾರ ನಡೆದ ಆರನೇ ಸಮನ್ವಯ ಸಮಿತಿ ಸಭೆಯಲ್ಲಿ ಪ್ರಮುಖವಾಗಿ ಸಚಿವ ಸಂಪುಟ ವಿಸ್ತರಣೆ ಹಾಗೂ ನಿಗಮ ಮಂಡಳಿ ಅಧ್ಯಕ್ಷ ಉಪಾಧ್ಯಕ್ಷರ ನೇಮಕ ಕುರಿತು ಗಂಭೀರ ಚರ್ಚೆಗಳು ನಡೆದವು.

ಸಂಪುಟ ವಿಸ್ತರಣೆಯಿಂದ ಎರಡೂ ಪಕ್ಷಗಳಲ್ಲಿ ಉಂಟಾಗಬಹುದಾದ ಬಂಡಾಯದ ಬಿಸಿಯನ್ನು ಆ ಪಕ್ಷದ ನಾಯಕರೇ ನಿರ್ವಹಿಸಬೇಕು. ಒಂದು ವೇಳೆ ಆಪರೇಷನ್ ಕಮಲದ ಬಲೆಗೆ ಶಾಸಕರು ಬೀಳುತ್ತಿದ್ದಾರೆ ಎನ್ನುವ ಸಣ್ಣ ಸೂಚನೆ ಸಿಕ್ಕರೂ, ಇದಾಗದ ರೀತಿಯಲ್ಲಿ ಎಚ್ಚರವಹಿಸಬೇಕೆಂದು ಕೆ.ಸಿ. ವೇಣುಗೋಪಾಲ್ ಖಡಕ್ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭೆ ಬಳಿಕ ಮಾತನಾಡಿದ ಸಮನ್ವಯ ಸಮಿತಿ ಅಧ್ಯಕ್ಷ ಸಿದ್ದರಾಮಯ್ಯ, ಸಂಪುಟ ವಿಸ್ತರಣೆ, ನಿಗಮ ಮಂಡಳಿ ನೇಮಕ ಹಾಗೂ ಸಂಸದೀಯ ಕಾರ್ಯದರ್ಶಿ ನೇಮಕವನ್ನು ಡಿ.22ಕ್ಕೆ ಮಾಡಲು ಎಲ್ಲರೂ ಒಪ್ಪಿದ್ದಾರೆ. ಆದ್ದರಿಂದ ಡಿ.22ಕ್ಕೆ ಸಂಪುಟ ವಿಸ್ತರಣೆಯಾಗುವುದು ಖಚಿತ ಎಂದು ಸ್ಪಷ್ಟಪಡಿಸಿದರು.



ಬೆಂಗಳೂರಿನಲ್ಲಿ ಮೈತ್ರಿ ಸರಕಾರದ ಸಮನ್ವಯ ಸಮಿತಿ ಬುಧವಾರ ಸಭೆ ನಡೆಯಿತು. ಮುಖ್ಯಮಂತ್ರಿ ಕುಮಾರಸ್ವಾಮಿ, ಮಾಜಿ ಸಿಎಂ ಸಿದ್ದರಾಮಯ್ಯ, ಕಾಂಗ್ರೆಸ್ ಉಸ್ತುವಾರಿ ವೇಣುಗೋಪಾಲ್, ಉಪಮುಖ್ಯಮಂತ್ರಿ ಪರಮೇಶ್ವರ, ಫಾರೂಖ್ ಭಾಗವಹಿಸಿದ್ದರು.

> ಮೈತ್ರಿ ಸರಕಾರದ ಆಡಳಿತ ವೈಖರಿ ಹಾಗೂ ಆಡಳಿತ, ವಿರೋಧ ಪಕ್ಷದ ತಂತ್ರಗಾರಿಕೆ ಬಗ್ಗೆ ಚರ್ಚೆ ನಡೆಸಲಾಗಿದೆ. ಪಕ್ಷದ ಹಿರಿಯ ನಾಯಕರು ನೀಡಿರುವ ಸಲಹೆಗಳನ್ನು ಸಮನ್ವಯ ಸಮಿತಿಯಲ್ಲಿ ಸಿದ್ದರಾಮಯ್ಯ ಹಾಗೂ ಪರಮೇಶ್ವರ ಅವರು ಚರ್ಚಿಸಲಿದ್ದಾರೆ.
>
> – **ದಿನೇಶ್ ಗುಂಡೂರಾವ್** ಕೆಪಿಸಿಸಿ ಅಧ್ಯಕ್ಷ

> ಬಿಜೆಪಿ ನಾಯಕರು ಹಗಲು ಕನಸು ಕಾಣುತ್ತಿದ್ದಾರೆ. ಕಾಂಗ್ರೆಸ್, ಜೆಡಿಎಸ್ ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಇದರೊಂದಿಗೆ ಬಿಜೆಪಿ ನಾಯಕರು ಹೇಳುತ್ತಿರುವಂತೆ ಯಾವ ಶಾಸಕರು ಪಕ್ಷವನ್ನು ಬಿಡುವುದಿಲ್ಲ.
>
> – **ಸಿದ್ದರಾಮಯ್ಯ** ಸಮನ್ವಯ ಸಮಿತಿ ಅಧ್ಯಕ್ಷ

### ಕಾಂಗ್ರೆಸ್ ಸ್ಥಾನ ಉಳಿಸಿ

ಇನ್ನು ಸಭೆಯಲ್ಲಿ ಮಾಜಿ ಸಚಿವ ಚೆಲುವರಾಯಸ್ವಾಮಿ, ನರೇಂದ್ರ ಸ್ವಾಮಿ ಸೇರಿದಂತೆ ಮಂಡ್ಯ ಭಾಗದ ಶಾಸಕರು ಹಾಗೂ ಮುಖಂಡರು, ಮಂಡ್ಯದಲ್ಲಿ ಕಾಂಗ್ರೆಸ್ ಸಂಘಟನೆ ಕುಸಿದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದು , ಭವಿಷ್ಯದ ದೃಷ್ಟಿಯಿಂದ ಈ ನಡೆ ಸೂಕ್ತವಲ್ಲ ಎಂದು ಎಚ್ಚರಿಸಿದ್ದಾರೆ. ಮಂಡ್ಯದಲ್ಲಿ ಎಲ್ಲವೂ ಜೆಡಿಎಸ್ ಮಯವಾಗಿದೆ. ಸಚಿವರು, ಶಾಸಕರು ಎಲ್ಲರೂ ಜೆಡಿಎಸ್‌ನವರೇ. ಜಿಲ್ಲೆಯಲ್ಲಿ ಕಾಂಗ್ರೆಸ್‌ಗಿಂತ ಜೆಡಿಎಸ್ ಹೆಚ್ಚು ಪ್ರಬಲವಾಗುತ್ತಿದೆ. ಮೈತ್ರಿ ಸರಕಾರದ ಹೆಸರಲ್ಲಿ ಪಕ್ಷ ಸಂಘಟನೆ ಕಳೆದುಕೊಳ್ಳುವುದು ಉತ್ತಮ ಬೆಳವಣಿಗೆಯಲ್ಲ. ಆದ್ದರಿಂದ ಮಂಡ್ಯದಲ್ಲಿ ಕಾಂಗ್ರೆಸ್ ಸಂಘಟನೆ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಮನವಿ ಸಲ್ಲಿಸಿದ್ದಾರೆ ಎನ್ನಲಾಗಿದೆ.

ಆರಂಭದಲ್ಲಿ ಒಳ್ಳೆಯ ದಿನವಾಗಿರುವುದರಿಂದ ಡಿ.9ಕ್ಕೆ ಸಂಪುಟ ವಿಸ್ತರಣೆ ಮಾಡಲು ನಿರ್ಧರಿಸಲಾಗಿತ್ತು. ಆದರೆ 10ರಿಂದಲೇ ಬೆಳಗಾವಿಯಲ್ಲಿ ಅಧಿವೇಶನ ಆರಂಭವಾಗುತ್ತಿರುವ ಹಿನ್ನಲೆಯಲ್ಲಿ, ಪ್ರಮಾಣ ವಚನ ಕಾರ್ಯಕ್ರಮದ ಬಳಿಕ ಬೆಳಗಾವಿಗೆ ಹೋಗುವುದಕ್ಕೆ ತೊಂದರೆಯಾಗುವುದರಿಂದ ದಿನಾಂಕವನ್ನು 22ಕ್ಕೆ ಮುಂದೂಡಲಾಗಿದೆ ಎಂದು ಸ್ಪಷ್ಟಪಡಿಸಿದರು.

**ಆರಂಭದಲ್ಲಿ ವಿರೋಧ:** ಆದರೆ ಸಭೆ ಆರಂಭವಾಗುತ್ತಿದ್ದ ಕಾಂಗ್ರೆಸ್ ನಾಯಕರು ಲೋಕಸಭೆ ಚುನಾವಣೆ ತನಕ ಸಂಪುಟ ವಿಸ್ತರಣೆ ಬೇಡ. ಇದರಿಂದ ಕೆಲ ಶಾಸಕರು ಪಕ್ಷವನ್ನು ತೊರೆಯುವ ಹಾಗೂ ಮೈತ್ರಿ ಸರಕಾರದ ವಿರುದ್ಧವೇ ಕೆಲಸ ಮಾಡುವ ಸಾಧ್ಯತೆಯಿದೆ. ಆದ್ದರಿಂದ ಲೋಕಸಭಾ ಚುನಾವಣೆ ಮುಗಿಯುವ ತನಕ ಯಾವುದೇ ಕಾರಣಕ್ಕೂ ಸಂಪುಟ ವಿಸ್ತರಣೆ ಬೇಡ ಎಂದಿದ್ದಾರೆ.

ಆದರೆ, ಮುಖ್ಯಮಂತ್ರಿ ಕುಮಾರಸ್ವಾಮಿ, ಈ ರೀತಿ ದಿನದೂಡುವುದರಿಂದ, ಸಾರ್ವಜನಿಕ ವಲಯದಲ್ಲಿ ಕೆಟ್ಟ ಸಂದೇಶ ರವಾನೆಯಾಗಲಿದೆ.


→ 9


# ಆಪರೇಷನ್ ಕಮಲ ದಿಲ್ಲಿ ನಾಯಕರ ಸರದಿ

### ಶೀಘ್ರ ಅಪವಿತ್ರ ಮೈತ್ರಿ ಸರಕಾರ ಬೀಳಲಿದೆ: ಜಾವ್ಡೇಕರ್





**ಹೊಸದಿಲ್ಲಿ:** ರಾಜ್ಯದ ಮೈತ್ರಿ ಸರಕಾರ ಬೀಳಿಸಲು ಬಿಜೆಪಿ ಆಪರೇಷನ್ ಕಮಲದ ಪ್ರಯತ್ನ ನಡೆಸುತ್ತಿರುವ ಆರೋಪದ ಬೆನ್ನಲ್ಲೇ ಕೇಂದ್ರ ಸಚಿವ ಪ್ರಕಾಶ್ ಜಾವ್ಡೇಕರ್ ರಾಜ್ಯ ರಾಜಕಾರಣದಲ್ಲಿ ಹೈ ಡ್ರಾಮ ನಡೆಯಲಿದೆ ಎಂದು ಭವಿಷ್ಯ ನುಡಿದಿರುವುದು ಭಾರಿ ಕುತೂಹಲ ಮೂಡಿಸಿದೆ.

ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಶೀಘ್ರದಲ್ಲೇ ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಅಪವಿತ್ರ ಮೈತ್ರಿ ಮುರಿದು ಬೀಳಲಿದೆ. ಕರ್ನಾಟಕದಲ್ಲಿ ನಾವು ಅತಿ ದೊಡ್ಡ ಪಕ್ಷವಾಗಿದ್ದರೂ ಕೇವಲ 7 ಸೀಟುಗಳ ಅಂತರದಲ್ಲಿ ಅಧಿಕಾರ ವಂಚಿತರಾಗಿದ್ದೇವೆ. ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಅವಕಾಶವಾದಿಗಳು ಅವರು ಎಂದಿಗೂ ಸ್ಥಿರ ಸರಕಾರ ನೀಡುವುದಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದೆ ಎಂದಿದ್ದಾರೆ.

**ತೋಳಗಳು ಬಂದಿವೆ:** ಬೆಳಗಾವಿ ಅಧಿವೇಶನದ ವೇಳೆ ಸರಕಾರ ಉರುಳುವುದು ಖಚಿತ ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ಭವಿಷ್ಯ ನುಡಿದಿದ್ದಾರೆ.

ಬೆಳಗಾವಿ ಅಧಿವೇಶನ ಪೂರ್ತಿ ಮುಗಿಯುವುದಿಲ್ಲ. ಅಷ್ಟರೊಳಗೆ ಸರಕಾರ ಪತನವಾಗಿರುತ್ತದೆ. ಶಾಸಕರ ಒಂದು ತಂಡ ಅಧಿವೇಶನದಲ್ಲಿ ಭಾಗವಹಿಸುವುದಿಲ್ಲ. ಸರಕಾರ ಅಲುಗಾಡುತ್ತಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಇದನ್ನು ಕಾದು ನೋಡಿ ಎಂದು ಸಮ್ಮಿಶ್ರ ಸರಕಾರದ ನಾಯಕರಿಗೆ ಶಾಕ್ ನೀಡಿದ್ದಾರೆ.

ಇಷ್ಟು ದಿನ 'ತೋಳ ಬಂತು ತೋಳ' ಎಂಬ ಕತೆಯಾಗಿತ್ತು. ತೋಳ ಬಂತು ಎಂಬ ಕತೆಗೂ ತೋಳವೇ ಬರುವುದಕ್ಕೂ ಬಹಳ ವ್ಯತ್ಯಾಸವಿದೆ. ಈಗಾಗಲೇ ಬೆಳಗಾವಿ ಮತ್ತು ಚಿಕ್ಕಬಳ್ಳಾಪುರದ ತೋಳಗಳು ಬಂದಾಗಿದೆ ಎಂದು ರಾಜ್ಯ ಸರಕಾರಕ್ಕೆ ದಿಗಿಲು ಹುಟ್ಟಿಸಿದ್ದಾರೆ.

### ಆರು ತಿಂಗಳಿಂದ ಇದೇ ರಾಗ...

ಕೇಂದ್ರ ಸಚಿವ ಹಾಗೂ ರಾಜ್ಯ ಬಿಜೆಪಿ ಉಸ್ತುವಾರಿ ಪ್ರಕಾಶ್ ಜಾವ್ಡೇಕರ್ ಅವರ ಮಾತಿಗೆ ತಿರುಗೇಟು ನೀಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿ, ಬಿಜೆಪಿ ನಾಯಕರ ಎಲ್ಲ ವಿಷಯಗಳಿಗೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಕಳೆದ ಆರು ತಿಂಗಳಿನಿಂದ ಬಿಜೆಪಿ ನಾಯಕರು ಭೂಕಂಪ ಆಗುತ್ತದೆ ಎನ್ನುತ್ತಿದ್ದಾರೆ. ಅವರು ಕೇವಲ ಸದ್ದು ಮಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದರು. ಕರ್ನಾಟಕದಲ್ಲಿ ಧಮಾಕಾ ಆಗಲಿದೆ. ಜನರು ಅದನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಆ ಧಮಾಕಾ ಏನು ಎಂಬುದನ್ನು ಬಿ.ಎಸ್.ಯಡಿಯೂರಪ್ಪ ಅವರೇ ಹೇಳಲಿದ್ದಾರೆ ಎಂದು ತಿರುಗುಬಾಣ ಬಿಟ್ಟರು.

### ಅಗಸ್ಟಾ ವೆಸ್ಟ್‌ಲೆಂಡ್: ಪಟಿಯಾಲಾ ಹೌಸ್ ನ್ಯಾಯಾಲಯದ ಮುಂದೆ ಹಾಜರು

# ಸಿಬಿಐ ವಶಕ್ಕೆ ಕ್ರಿಶ್ಚಿಯನ್ ಮೈಕಲ್

**ದೆಹಲಿ:** ವಿವಿಐಪಿ ಹೆಲಿಕಾಪ್ಟರ್ ಖರೀದಿಗೆ ಸಂಬಂಧಿಸಿದ ಅಗಸ್ಟಾ ವೆಸ್ಟ್‌ಲೆಂಡ್ ಹಗರಣದ ಮಧ್ಯವರ್ತಿ ಕ್ರಿಶ್ಚಿಯನ್ ಮೈಕಲ್ ಅವರನ್ನು ಬುಧವಾರ ಪಟಿಯಾಲಾ ಹೌಸ್ ಕೋರ್ಟ್ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು. ಪ್ರಕರಣದ ವಿಚಾರಣೆ ನಡೆಸಿದ ಕೋರ್ಟ್ ಮೈಕಲ್ ಅವರನ್ನು ಐದು ದಿನಗಳ ಕಾಲ ಸಿಬಿಐ ವಶಕ್ಕೆ ನೀಡಿದೆ.

3,600 ಕೋಟಿ ಯೋಜನೆಯ ಹಗರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿಯಾಗಿರುವ ಮೈಕಲ್‌ನನ್ನು ದುಬೈ, ಭಾರತಕ್ಕೆ ಮಂಗಳವಾರ ಹಸ್ತಾಂತರಿಸಿತು. ಮಂಗಳವಾರ ರಾತ್ರಿ ಭಾರತಕ್ಕೆ ಆಗಮಿಸಿದ ಅವರನ್ನು ಸಿಬಿಐ ವಶಕ್ಕೆ ಪಡೆದು ಬುಧವಾರ ನ್ಯಾಯಾಲಯದ ಮುಂದೆ ಹಾಜರುಪಡಿಸಿದೆ.

ಸಿಬಿಐ ವಿಶೇಷ ನ್ಯಾಯಾಲಯದ ನ್ಯಾ.ಅರವಿಂದ್ ಕುಮಾರ್ ಅವರ ಪೀಠದ ಮುಂದೆ ಮೈಕಲ್ ಅವರನ್ನು ಹಾಜರು ಪಡಿಸಲಾಯಿತು. ಇದಕ್ಕೂ ಮುನ್ನ ದೆಹಲಿಯಲ್ಲಿ ಸಿಬಿಐ



ಅಧಿಕಾರಿಗಳು ಮೈಕಲ್‌ನನ್ನು ವಿಚಾರಣೆಗೆ ಒಳಪಡಿಸಿದ್ದರು.

**ನ್ಯಾಯಾಲಯದ ಬಳಿ ಬಿಗಿ ಭದ್ರತೆ:** ಮೈಕಲ್‌ನನ್ನು ಕೋರ್ಟ್‌ಗೆ ಹಾಜರುಪಡಿಸುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಸುತ್ತಮುತ್ತಲ ಪ್ರದೇಶದಲ್ಲಿ ಬಿಗಿ ಭದ್ರತೆ ಒದಗಿಸಲಾಗಿತ್ತು. ಕೋರ್ಟ್ ಆವರಣದಲ್ಲಿ 15–20 ಸಿಆರ್‌ಪಿಎಫ್ ಸಿಬ್ಬಂದಿ ಹಾಗೂ 30 ದೆಹಲಿ ಪೊಲೀಸರನ್ನು ನಿಯೋಜಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.


→ 9


### ಮೈಕಲ್ ಎಲ್ಲ ಬಾಯ್ಬಿಡುತ್ತಾನೆ: ಮೋದಿ

ಅಗಸ್ಟಾ ವೆಸ್ಟ್‌ಲೆಂಡ್ ಹಗರಣಕ್ಕೆ ಸಂಬಂಧಿಸಿದಂತೆ ಮಧ್ಯವರ್ತಿ ಕ್ರಿಶ್ಚಿಯನ್ ಮೈಕಲ್ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದ್ದಾರೆ. 'ಈ ಹಗರಣಕ್ಕೆ ಸಂಬಂಧಿಸಿದಂತೆ ರಾಜದಾರ್ (ಕ್ರಿಶ್ಚಿಯನ್ ಮೈಕಲ್) ಎಲ್ಲ ರಹಸ್ಯಗಳನ್ನು ಬಾಯ್ಬಿಡಲಿದ್ದಾನೆ. ಯುಪಿಎ ಆಡಳಿತ ಅವಧಿಯಲ್ಲಿ ಈ ಹಗರಣ ನಡೆದಿದ್ದು, ನಾವು ಅಧಿಕಾರಕ್ಕೆ ಬಂದಾಗ ಈ ಪ್ರಕರಣದ ತನಿಖೆ ನಡೆಸಿದ್ದೇವೆ. ಈ ಪ್ರಕರಣದಲ್ಲಿ ಭಾಗಿಯಾಗಿದ್ದ ದುಬೈ ಮೂಲದ ವ್ಯಕ್ತಿಯನ್ನು ಪತ್ತೆಹಚ್ಚಿದ್ದು, ಆತ ಹಗರಣದ ಸಂಪೂರ್ಣ ಮಾಹಿತಿ ನೀಡಲಿದ್ದಾನೆ. ಈ ವಿಚಾರ ಎಲ್ಲಿಯವರೆಗೂ ಸಾಗಲಿದೆ ಎಂಬುದರ ಬಗ್ಗೆ ಗೊತ್ತಿಲ್ಲ' ಎಂದು ತಿಳಿಸಿದರು.

# ಜಿಸ್ಯಾಟ್-11 ಯಶಸ್ವಿ ಉಡಾವಣೆ



ಭಾರತದಲ್ಲಿ ಉಪಗ್ರಹ ಆಧಾರಿತ ಬ್ರಾಡ್‌ಬ್ಯಾಂಡ್ ಸೇವೆಯನ್ನು ನನಸಾಗಿಸುವ ಜಿಸ್ಯಾಟ್-11 ಉಪಗ್ರಹದ ಉಡಾವಣೆ ಬುಧವಾರ ಬೆಳಗಿನ ಜಾವ 2.07 ಗಂಟೆಗೆ ದಕ್ಷಿಣ ಅಮೆರಿಕದ ಕೌರೂರ್‌ನಲ್ಲಿರುವ ಫ್ರೆಂಚ್ ಗಯಾನಾದಿಂದ ಉಡಾವಣೆ ಮಾಡಲಾಗಿದೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು(ಇಸ್ರೊ) ಈವರೆಗೆ ನಿರ್ಮಿಸಿರುವ ಉಪಗ್ರಹಗಳಲ್ಲಿ ಜಿಸ್ಯಾಟ್-11 ಅತ್ಯಂತ ದೈತ್ಯ ಮತ್ತು ಹೆಚ್ಚು ತೂಕ ಸಾಮರ್ಥ್ಯದ ಉಪಗ್ರಹ ಇದಾಗಿದ್ದು, ಇದನ್ನು ಬಿಗ್ ಬರ್ಡ್ ಎಂದೇ ಕರೆಯಲಾಗುತ್ತಿದೆ. ಇದರ ತೂಕ 5,854 ಕೆ.ಜಿ. ಇಷ್ಟು ತೂಕದ ಉಪಗ್ರಹವನ್ನು ಹೊತ್ತೊಯ್ಯುವ ಸಾಮರ್ಥ್ಯವಿರುವ ರಾಕೆಟ್ ಇಸ್ರೊ ಬಳಿ ಇಲ್ಲವಾದ್ದರಿಂದ ಐರೋಪ್ಯ ಬಾಹ್ಯಾಕಾಶ ಸಂಸ್ಥೆಯ ಆ್ಯರಿಯಾನ್-5 ರಾಕೆಟ್ ಮೂಲಕ ಉಡಾವಣೆ ಮಾಡಲಾಗಿದೆ. 'ಜಿಸ್ಯಾಟ್-11 ಭಾರತ್ ನೆಟ್ ಯೋಜನೆ ಅಡಿ ಎಲ್ಲ ಗ್ರಾಮ ಪಂಚಾಯಿತಿಗಳಿಗೂ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸುವ ಉಪಗ್ರಹ ಇದಾಗಿದೆ' ಎಂದು ಇಸ್ರೋ ಮುಖ್ಯಸ್ಥ ಡಾ.ಕೆ.ಶಿವನ್ ಹೇಳಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರು ಜಿಸ್ಯಾಟ್–11 ಉಪಗ್ರಹ ಯಶಸ್ವಿ ಉಡಾವಣೆ ಕುರಿತು ಸರಣಿ ಟ್ವೀಟ್ ಮಾಡಿ ಇಸ್ರೋದ ವಿಜ್ಞಾನಿಗಳಿಗೆ ಶುಭ ಕೋರಿದ್ದಾರೆ. 'ಇದು ಭಾರತ ಬಾಹ್ಯಾಕಾಶದಲ್ಲಿ ಒಂದು ಅತಿ ದೊಡ್ಡ ಮೈಲುಗಲ್ಲಿನಲ್ಲಿ ಈ ಜಿಸ್ಯಾಟ್–11 ಉಪಗ್ರಹ ಆಗಿದೆ. ಅತಿ ದೈತ ಹಾಗೂ ಹೆಚ್ಚು ತೂಕದ, ದೇಶದ ಎಲ್ಲ ಗ್ರಾಮ ಪಂಚಾಯತಿಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸುವ ವಿಶಿಷ್ಟ ಉಪಗ್ರಹ ಇದಾಗಿದೆ' ಎಂದು ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

### ಉಪಯೋಗಗಳು

- ಡಿಶ್ ಆ್ಯಂಟೆನಾ ಮೂಲಕ ಮನೆಗಳಿಗೆ ಉಪಗ್ರಹ ಬ್ರಾಡ್‌ಬ್ಯಾಂಡ್ ಸಂಪರ್ಕ ಪಡೆಯಬಹುದು.
- ವಿಮಾನದಲ್ಲಿ ಅಂತರ್ಜಾಲ ಸಂಪರ್ಕ ಪಡೆಯಬಹುದು.
- ದೇಶದ ಯಾವುದೇ ಮೂಲೆಯಲ್ಲೂ ವೇಗದ ಬ್ರಾಡ್‌ಬ್ಯಾಂಡ್ ಸಂಪರ್ಕ
- ಭಾರತ್ ನೆಟ್ ಯೋಜನೆ ಅಡಿ ಎಲ್ಲಾ ಗ್ರಾಮ ಪಂಚಾಯತಿಗಳಿಗೂ ಬ್ರಾಡ್‌ಬ್ಯಾಂಡ್ ಸಂಪರ್ಕ.

### 16 gbps ವೇಗ

ಈ ಉಪಗ್ರಹ ಕೇಂದ್ರಿಕೃತ ಕಿರಣಗಳನ್ನು ಬಳಸುವುದರಿಂದ ದತ್ತಾಂಶ ವಿನಿಮಯದ ವೇಗ ಹೆಚ್ಚು. ಈ ಉಪಗ್ರಹವು ಕಾರ್ಯಾರಂಭ ಮಾಡಿ, ಸಾರ್ವಜನಿಕ ಸೇವೆಗೆ ಲಭ್ಯವಾದರೆ 16 ಜಿಬಿಪಿಎಸ್ ನಷ್ಟು ವೇಗದ ಅಂತರ್ಜಾಲ ಸೇವೆ ಆರಂಭಿಸಬಹುದು. ಜಿಸ್ಯಾಟ್-11 ಉಪಗ್ರಹವು ಇಡೀ ದೇಶಕ್ಕೆ ಸಂಪರ್ಕ ಏರ್ಪಡಿಸಲು ಹಲವು ಇನ್ಫ್ರಾ ರೆಡ್ ಕಿರಣಗಳನ್ನು ಬಳಸುತ್ತದೆ. ಈ ಕಿರಣಗಳ ವ್ಯಾಪ್ತಿ ತೀರಾ ಕಡಿಮೆ. ಆದರೆ ಸಾಮರ್ಥ್ಯ ಅತ್ಯಧಿಕ. ಹೀಗಾಗಿ ದತ್ತಾಂಶ ರವಾನೆಗೆ ಪ್ರಚಂಡ ವೇಗವಿರುತ್ತದೆ. ಇಂತಹ 32 ಕಿರಣಗಳು ದೇಶದ 16 ಸ್ಥಳಗಳಲ್ಲಿ ಕೇಂದ್ರಿಕೃತವಾಗಿರುತ್ತವೆ. ಹೀಗಾಗಿ ದೇಶದ ಎಲ್ಲಾ ಭಾಗಗಳಲ್ಲೂ ಒಂದೇ ವೇಗದ ಅಂತರ್ಜಾಲ ಸೇವೆ ಲಭ್ಯವಾಗಲಿದೆ.




ಶ್ರೀ ಹೆಚ್. ಡಿ. ಕುಮಾರಸ್ವಾಮಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಡಾ|| ಜಿ. ಪರಮೇಶ್ವರ
ಸನ್ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ

"ಎಲ್ಲಿಯವರೆಗೂ ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸಲಾಗುವುದಿಲ್ಲವೋ, ಅಲ್ಲಿಯವರೆಗೂ ಕಾನೂನು ಮೂಲಕ ದತ್ತವಾಗಿರುವ ಸ್ವಾತಂತ್ರ್ಯವೂ ಅಲಭ್ಯ."
ಡಾ|| ಬಿ. ಆರ್. ಅಂಬೇಡ್ಕರ್

ಮಾನವಹಕ್ಕು ಹಾಗೂ ಸಾಮಾಜಿಕ ಗೌರವಕ್ಕಾಗಿ ಹೋರಾಡಿದ
ಶ್ರೇಷ್ಠ ಸಾರ್ವಜನಿಕ ಹಿತರಕ್ಷಕ ಹಾಗೂ ತತ್ವಜ್ಞಾನಿಗಳಿಗೆ
ನಮ್ಮ ವಿನಮ್ರ ನಮನಗಳು.



ಡಾ|| ಬಿ. ಆರ್. ಅಂಬೇಡ್ಕರ್
(ಏಪ್ರಿಲ್ 14, 1891 - ಡಿಸೆಂಬರ್ 6, 1956)
ಮಹಾಪರಿನಿರ್ವಾಣ ದಿನ, ಡಿಸೆಂಬರ್ 6
STARK.Blr.8718